UNIVERSITY LIBRARY
THURSDAY 06-11-2025
Agri Newspaper Clippings
For more information visit University Library Website
Web - uasbagrilibindia.org
E-mail- librarian@uasbangalore.edu.in

ಜಿಕೆವಿಕೆಯಲ್ಲಿ ಕೃಷಿ ಮೇಳಕ್ಕೆ ಭರದ ಸಿದ್ಧತೆ

ಸಮೃದ್ಧ ಕೃಷಿ-ವಿಕಸಿತ ಭಾರತ-ನೆಲ, ಜಲ, ಬೆಳೆ ಘೋಷವಾಕ್ಯ | ನ.13ರಿಂದ ಕೃಷಿ ಸಂತೆ | 3 ಎಕರೆ ಪ್ರದೇಶದಲ್ಲಿ ಹಳ್ಳಿಮನೆ ನಿರ್ಮಾಣ

■ ಉದಯವಾಣಿ ಸಮಾಚಾರ

ಬೆಂಗಳೂರು: ಹೆಬ್ಬಾಳದ ಗಾಂಧಿ ಕೃಷಿ ವಿಜ್ಞಾನ ಕೇಂದ್ರ (ಜಿಕೆವಿಕೆ) ಆವರಣದಲ್ಲಿ ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದ ವತಿಯಿಂದ ನ.13 ರಿಂದ 16 ರವರೆಗೆ 4 ದಿನಗಳು ನಡೆಯಲಿರುವ ಈ ಬಾರಿಯ ಬಹುನಿರೀಕ್ಷಿತ ಕೃಷಿಮೇಳಕ್ಕೆ ದಿನಗಣನೆ ಶುರುವಾಗಿದೆ.

ಒಂದು ವಾರವಷ್ಟೇ ಬಾಕಿ ಉಳಿದಿದ್ದು ನಾಡಿನ ರೈತರು ಹಾಗೂ ನವೋದ್ಯಮಿಗಳು, ಮಕ್ಕಳು, ಮಹಿಳೆಯರು ಸೇರಿದಂತೆ ಕೃಷಿ ಆಸಕ್ತರನ್ನು ಆಕರ್ಷಿಸಲು ಎಂದಿನಂತೆ ಈ ಬಾರಿಯೂ ಕೃಷಿ ವಿಶ್ವವಿದ್ಯಾಲಯ ಸಜ್ಜಾಗಿದೆ. ಹಲವು ವಿಶೇಷತೆಗಳೊಂದಿಗೆ ಭರ್ಜರಿ ಸಿದ್ಧತೆಗಳನ್ನು ಕೈಗೊಂಡಿದ್ದು ಕಾರ್ಯಗಳು ಭರದಿಂದ ಸಾಗುತ್ತಿದೆ.

2025 ರ ಕೃಷಿ ಮೇಳವು ಸಮೃದ್ಧ ಕೃಷಿ-ವಿಕಸಿತ ಭಾರತ- ನೆಲ, ಜಲ, ಬೆಳೆ ಎಂಬ ಘೋಷವಾಕ್ಯದಡಿ ನಡೆಯಲಿದೆ. ಈ ಬಾರಿಯ ಮೇಳವನ್ನು ಅತ್ಯಾಕರ್ಷಕಗೊಳಿಸಲು ಬೆಂಗಳೂರು ಕೃಷಿ ವಿಶ್ವವಿದ್ಯಾಲಯ ವಿವಿಧ ಇಲಾಖೆ ಹಾಗೂ ಸಂಘ-ಸಂಸ್ಥೆಗಳ ಸಹಯೋಗದಲ್ಲಿ ಕಾರ್ಯಚಟುವಟಿಕೆಯನ್ನು ಆರಂಭಿಸಿದೆ.


ಜಿಕೆವಿಕೆಯಲ್ಲಿ 3 ಎಕರೆ ಪ್ರದೇಶದಲ್ಲಿ ಹಳ್ಳಿಮನೆ ನಿರ್ಮಿಸಿರುವುದು.

ಕೃಷಿ ಪ್ರವಾಸೋದ್ಯಮ ಈ ಬಾರಿಯ ವಿಶೇಷ ಆಕರ್ಷಣೆಯಾಗಿದ್ದು ಅದರೊಟ್ಟಿಗೆ ಮೇಳದಲ್ಲಿ ದುಬಾರಿ ತಳಿಯ ವಿವಿಧ ಜಾನುವಾರುಗಳು, ವಿನೂತನ ಸುಧಾರಿತ ಬೆಳೆಯ ಸಂಶೋಧನಾ ತಳಿಗಳು, ಹೊಸ ಮಾದರಿಯ ಕೃಷಿ ಯಂತ್ರೋಪಕರಣಗಳು ಮೇಳಕ್ಕೆ ಬರುವ ಜನರನ್ನು ಆಕರ್ಷಿಸಲು ಸಜ್ಜಾಗಿವೆ.

ಪ್ರಮುಖ ಆಕರ್ಷಣೆಗಳು: ಈ ಬಾರಿ ಮೇಳದಲ್ಲಿ ಒಣ ಬೇಸಾಯಕ್ಕೆ ಅಧಿಕ ಇಳುವರಿ ನೀಡುವ ಬಿಸಿಎಚ್-162 ಹರಳು ತಳಿ, ಉತ್ಕೃಷ್ಟ ನೀಲಿ ತಿರುಳು ಹೊಂದಿರುವ ಸಿಎಚ್ ಎನ್‌ಬಿಟಿ-1 ತಳಿಯ ಕಪ್ಪು ಅರಿಶಿಣ, ಕೆಬಿ ಎಸ್‌ಎಚ್-88 ತಳಿಯ ಬ್ರೀಡ್ ಸೂರ್ಯ ಕಾಂತಿ, ಹಾಗೂ ಸಿಎನ್‌ಜೆಎಸ್-1 ತಳಿಯ ಜೋಳದ ತಳಿಗಳು ಪ್ರಮುಖ ಆಕರ್ಷಣೆಯಾಗಿ ಅನಾವರಣಗೊಳ್ಳಲಿವೆ.

ಮೇಳದಲ್ಲಿ ಕೃಷಿ ಪ್ರವಾಸೋದ್ಯಮ ವಿಶೇಷ ಆಕರ್ಷಣೆ

ಹವಾಮಾನ ಬದಲಾವಣೆ, ಮಾರುಕಟ್ಟೆ ಅಸ್ಥಿರತೆ ಸಂದರ್ಭದಲ್ಲಿ ಕೃಷಿಯೊಂದಿಗೆ ಪರ್ಯಾಯ ಆದಾಯದ ಮೂಲಕ್ಕಾಗಿ ಹೊಸ ಪರಿಕಲ್ಪನೆಯ ಕೃಷಿ ಪ್ರವಾಸೋದ್ಯಮ ಈ ಬಾರಿಯ ಮೇಳದ ವಿಶೇಷ ಆಕರ್ಷಣೆಯಾಗಿದೆ. ಗ್ರಾಮೀಣ ಪಾರಂಪರಿಕ ಕೃಷಿ ಪದ್ಧತಿ, ದೈನಂದಿನ ಕೃಷಿ ಚಟುವಟಿಕೆ, ಗ್ರಾಮೀಣ ಕಲೆ ಸಂಸ್ಕೃತಿ, ಆಹಾರ ಪದ್ಧತಿ, ಉಡುಗೆ-ತೊಡುಗೆಯನ್ನು ನಗರವಾಸಿಗಳಿಗೆ ಪರಿಚಯಿಸಿ ಪ್ರವಾಸಿಗರನ್ನು ಕೃಷಿಗೆ ಕರೆತರುವುದು ಹಾಗೂ ಕೃಷಿ ಆಧಾರಿತ ಚಟುವಟಿಕೆಗೆ ಉತ್ತೇಜಿಸುವ ಮೂಲಕ ಆದಾಯ ಗಳಿಕೆ ಮಾರ್ಗವನ್ನು ಪರಿಚಯಿಸುವುದು ಇದರ ಉದ್ದೇಶವಾಗಿದೆ. ಕೃಷಿ ಪ್ರವಾಸೋದ್ಯಮ ವಿಶೇಷತೆಯಾಗಿ ಸುಮಾರು 3 ಎಕರೆ ಪ್ರದೇಶದಲ್ಲಿ ಈಗಾಗಲೇ ಹಳ್ಳಿಮನೆ ನಿರ್ಮಿಸಲಾಗಿದ್ದು, ಪಾರಂಪರಿಕ ಕೃಷಿ ಪರಿಕರಗಳ ಪ್ರದರ್ಶನದ ವ್ಯವಸ್ಥೆ ಮಾಡಲಾಗಿದೆ. ನಗರ ವಾಸಿಗಳಲ್ಲಿ ಆದರಲ್ಲಿಯೂ ಮಕ್ಕಳಿಗೆ ಹಿಂದಿನ ಕಾಲದಲ್ಲಿ ಬಳಸುತ್ತಿದ್ದ ಸೇರು, ಪಾವು, ಚಟಾಕಿ, ಬೀಸು ಕಲ್ಲು, ಹೊರಳು, ಒನಕೆಗಳು, ಮೊರಗಳು, ಮಡಿಕೆಗಳು, ಸಡ್ಡಿಗಳು, ಗೊಟ್ಟಗಳು, ಮಂಕರಿಗಳು, ಕಣಜ ಸೇರಿದಂತೆ 50ಕ್ಕೂ ಹೆಚ್ಚು ಪಾರಂಪರಿಕ ಪರಿಕರಗಳನ್ನು ಒಂದೇ ವೇದಿಕೆಯಲ್ಲಿ ಪ್ರದರ್ಶನಕ್ಕೆ ಇಡಲು ಸಿದ್ಧತೆ ಮಾಡಿಕೊಳ್ಳಲಾಗಿದೆ.

ಕೃಷಿ ಪ್ರವಾಸೋದ್ಯಮ ವಿಶೇಷತೆಯಾಗಿ ಹಳ್ಳಿಮನೆ



ನಿರ್ಮಿಸಲಾಗುತ್ತಿದೆ. ಸೇರು, ಪಾವು, ಬೀಸು ಕಲ್ಲು ಸೇರಿ 50ಕ್ಕೂ ಹೆಚ್ಚು ಪಾರಂಪರಿಕ ಕೃಷಿ ಪರಿಕರಗಳನ್ನು ಈ ಬಾರಿಯ ಕೃಷಿ ಮೇಳದಲ್ಲಿ ಪ್ರದರ್ಶನಕ್ಕಿಡಲಾಗುವುದು.

■ ಡಾ.ಎಸ್.ವಿ.ಸುರೇಶ್, ಬೆಂ.ಕೃಷಿ ವಿವಿ ಕುಲಪತಿ

ಇದರೊಂದಿಗೆ ಸುಧಾರಿತ ಕೃಷಿ ಯಂತ್ರಗಳು, ಸಮಗ್ರ ಬೇಸಾಯ ಪದ್ಧತಿಗಳು, ಜೈವಿಕ ಹಾಗೂ ನವೀಕರಿಸಬಹುದಾದ ಇಂಧನ, ಜಲಾನಯನ ನಿರ್ವಹಣೆ, ಸಾವಯವ ಕೃಷಿ, ಮಣ್ಣು ರಹಿತ ಕೃಷಿ, ಕೃಷಿ ಉತ್ಪನ್ನಗಳ ಮೌಲ್ಯವರ್ಧನೆ, ಕೃಷಿ ಯಂತ್ರೋಪಕರಣಗಳು, ಪಶು ಸಂಗೋಪನೆ, ಹೈನುಗಾರಿಕೆ, ಕುರಿ, ಕೋಳಿ ಸಾಕಾಣಿಕೆ, ಮಳೆ ನೀರಿನ ಕೊಯ್ಲು, ಸಿರಿಧಾನ್ಯಗಳು, ಕೀಟ ಹತೋಟಿ, ಮಾರುಕಟ್ಟೆ ನೈಪುಣ್ಯತೆ ಮಾಹಿತಿ, ಪ್ರಾತ್ಯಕ್ಷಿಕೆಗಳು ಈ ಬಾರಿಯ ಮೇಳದಲ್ಲಿ ಲಭ್ಯವಿರಲಿದೆ.

ಪಾರಂಪರಿಕ ಬೇಸಾಯ ಪದ್ಧತಿಗಳಾದ ಕೆಸರು ಗದ್ದೆ ಚಟುವಟಿಕೆ, ಉಳುಮೆ, ಬಿತ್ತನೆ, ಕೊಯ್ಲು, ಒಕ್ಕಣೆ ಪ್ರಾತ್ಯಕ್ಷಿಕೆಗಳು ಇರಲಿವೆ. ಜೊತೆಗೆ ಎತ್ತಿನಗಾಡಿ ಸವಾರಿ, ಹಾಲು ಕರೆಯುವುದು, ಬೆರಣಿ ತಟ್ಟುವುದು, ರಾಗಿ ಬೀಸುವುದು ಮುಂತಾದ ಚಟುವಟಿಕೆಗಳಲ್ಲಿ ಆಸಕ್ತರು ಭಾಗವಹಿಸಬಹುದು. ಜೊತೆಗೆ ಎಣ್ಣೆ-ಗಾಣ, ಆಲೆಮನೆ, ಕುಲುಮೆ, ನೇಯ್ಗೆ, ಬುಟ್ಟಿ ಹೆಣೆಯುವಿಕೆ, ಮಡಿಕೆ ತಯಾರಿಸುವುದು, ಹಗ್ಗ ನೇಯುವುದು, ನೇಗಿಲು ತಯಾರಿಕೆ ಮುಂತಾದ ಸಾಂಪ್ರದಾಯಿಕ ಕಸುಬುಗಳನ್ನು ಪರಿಚಯಿಸಲು ಈ ಕೃಷಿ ಪ್ರವಾಸೋದ್ಯಮ ಮಾದರಿ ಸಜ್ಜಾಗಿದೆ.

Udayavani pg 03

ಇಂದಿನಿಂದ ಭಾರತೀಯ ತೋಟಗಾರಿಕೆ ಕಾಂಗ್ರೆಸ್

ತೋಟಗಾರಿಕೆ ಕ್ಷೇತ್ರದ ಹೊಸ ಆವಿಷ್ಕಾರಗಳ ಚಿಂತನ ಮಂಥನ | 22 ದೇಶಗಳ ಪ್ರತಿನಿಧಿಗಳು ಭಾಗಿ

■ ವಿಕ ಸುದ್ದಿಲೋಕ ಬೆಂಗಳೂರು

ಜಿಕೆವಿಕೆ ಆವರಣದಲ್ಲಿ ಆಯೋಜನೆ

ದೇಶದ ತೋಟಗಾರಿಕೆ ಕ್ಷೇತ್ರದಲ್ಲಿ ಉತ್ಪಾದನೆ ಮತ್ತು ರಫ್ತು ಪ್ರಮಾಣ ಹೆಚ್ಚಿಸಲು ಕೈಗೊಳ್ಳಬೇಕಾದ ಸಮಗ್ರ ಸ್ವರೂಪದ ನೀತಿ ನಿರೂಪಣೆ ಬಗ್ಗೆ ಚಿಂತನ ಮಂಥನ ನಡೆಸಲು ಹೆಬ್ಬಾಳದ ಜಿಕೆವಿಕೆ ಆವರಣದಲ್ಲಿನ ನ.6 ರಿಂದ ನಾಲ್ಕು ದಿನಗಳ ಕಾಲ ದ್ವೈವಾರ್ಷಿಕ ಭಾರತೀಯ ತೋಟಗಾರಿಕೆ ಕಾಂಗ್ರೆಸ್ (ಐಎಚ್‌ಸಿ) ಅಧಿವೇಶನ ಆಯೋಜಿಸಲಾಗಿದೆ.

''ತೋಟಗಾರಿಕೆ ಕ್ಷೇತ್ರದಲ್ಲಿ ಹೊಸ ಆವಿಷ್ಕಾರ, ತಂತ್ರಜ್ಞಾನ ಬಳಸುವ ಮೂಲಕ ರಫ್ತು ಪ್ರಮಾಣವನ್ನು ಹೆಚ್ಚಿಸಬೇಕಾಗಿದೆ. ಹೀಗಾಗಿ, ಹೊನಲಿಲ್ಲಿಯಲ್ಲಿರುವ ಭಾರತೀಯ ತೋಟಗಾರಿಕೆ ವಿಜ್ಞಾನಗಳ ಅಕಾಡೆಮಿ (ಐಎಚ್‌ಎಸ್) ಹಾಗೂ ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ಸಹಯೋಗದಲ್ಲಿ ಅಧಿವೇಶನ ಹಮ್ಮಿಕೊಳ್ಳಲಾಗಿದೆ,'' ಎಂದು ಐಸಿಎಆರ್‌ನ ಹೆಚ್ಚುವರಿ ಮಹಾನಿರ್ದೇಶಕ ಡಾ. ವಿ.ಬಿ. ಪಟೇಲ್ ಬುಧವಾರ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

''ಜಿಕೆವಿಕೆ ಆವರಣದಲ್ಲಿರುವ ಡಾ. ಬಾಬು ರಾಜೇಂದ್ರಪ್ರಸಾದ್ ಅಂತಾರಾಷ್ಟ್ರೀಯ ಸಮ್ಮೇಳನ ಸಭಾಂಗಣದಲ್ಲಿನ.6ರಂದು ಬೆಳಗ್ಗೆ 9 ಗಂಟೆಗೆ



ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ಅಧಿವೇಶನವನ್ನು ಉದ್ಘಾಟಿಸಿದ್ದಾರೆ. ಐಸಿಎಆರ್‌ನ ಮಾಜಿ ಮಹಾನಿರ್ದೇಶಕ ಡಾ. ಆರ್.ಎಸ್. ಪರೋಡಾ, ಡಿಎಆರ್‌ಇ ಕಾರ್ಯದರ್ಶಿ ಡಾ. ಮಂಗಿಲಾಲ್ ಜಾಟ್, ಐಐಎಚ್‌ಆರ್ (ಹೆಸರಘಟ್ಟ) ನಿರ್ದೇಶಕ ಡಾ. ತುಷಾರ್ ಕಾಂತಿ ಬೆಹೆರಾ, ಕೃಷಿ ವಿವಿ ಕುಲಪತಿ ಡಾ. ಎಸ್.ವಿ. ಸುರೇಶ್ ಸೇರಿ ಹಲವು ಗಣ್ಯರು ಪಾಲ್ಗೊಳ್ಳಲಿದ್ದಾರೆ.

ಅಂತಾರಾಷ್ಟ್ರೀಯ ಸಭೆ ನಿಗದಿ: ತೋಟಗಾರಿಕೆ ಕಾಂಗ್ರೆಸ್‌ನಲ್ಲಿ 9 ತಾಂತ್ರಿಕ ಗೋಷ್ಠಿ, 11 ಸಮವರ್ತಿ ಗೋಷ್ಠಿಗಳು, ಉಪನ್ಯಾಸ ಹಾಗೂ ವಿಷಯಾಧಾರಿತ ಕಾರ್ಯಾಗಾರ ನಿಗದಿಯಾಗಿದೆ.

ತೋಟಗಾರಿಕೆ ಕ್ಷೇತ್ರದ ವಿವಿಧ ವಿಜ್ಞಾನಗಳ ಬಗ್ಗೆ ಈವರೆಗೆ ಆಗಿರುವ ಸಾಧನೆ ಹಾಗೂ ಭವಿಷ್ಯದಲ್ಲಿ ಕೈಗೊಳ್ಳಬೇಕಿರುವ ನಿರ್ಧಾರಗಳ ಬಗ್ಗೆ ಸ್ಪಷ್ಟ ಕಾರ್ಯಸೂಚಿಯನ್ನು ಸಿದ್ಧಪಡಿಸಲಾಗುತ್ತದೆ. ಇವುಗಳನ್ನು ಶಿಫಾರಸು ರೂಪದಲ್ಲಿ ಸರ್ಕಾರಕ್ಕೆ ಸಲ್ಲಿಸಲಿದ್ದು, ಕೊನೆ ದಿನ ಕೆಲವೊಂದು ನಿರ್ಣಯಗಳನ್ನು ತೆಗೆದುಕೊಳ್ಳಲಾಗುತ್ತದೆ. ಇದರ ಜತೆಗೆ ಅಂತಾರಾಷ್ಟ್ರೀಯ ಸಭೆ ಕೂಡ ನಿಗದಿಯಾಗಿದೆ. ಅಮೆರಿಕ, ಬ್ರೆಜಿಲ್ ಇಂಡೋನೇಷ್ಯಾ ಸೇರಿ 22 ದೇಶಗಳ ವಿಜ್ಞಾನಿ ಪ್ರತಿನಿಧಿಗಳು ಸಭೆಗಳಲ್ಲಿ ಭಾಗಿಯಾಗಲಿದ್ದಾರೆ ಎಂದು ಐಸಿಎಆರ್‌ನ ಹೆಚ್ಚುವರಿ ಮಹಾನಿರ್ದೇಶಕ ಡಾ. ವಿ.ಬಿ. ಪಟೇಲ್ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಸಮವರ್ತಿ ಗೋಷ್ಠಿಗಳು, ಉಪನ್ಯಾಸ ಹಾಗೂ ವಿಷಯಾಧಾರಿತ ಕಾರ್ಯಾಗಾರಗಳು ನಡೆಯಲಿವೆ. ತೋಟಗಾರಿಕೆ ಕ್ಷೇತ್ರದ ಈವರೆಗಿನ ಸಾಧನೆ ಹಾಗೂ ಭವಿಷ್ಯದಲ್ಲಿ ಕೈಗೊಳ್ಳಬೇಕಿರುವ ನಿರ್ಧಾರಗಳ ಬಗ್ಗೆ ಸ್ಪಷ್ಟ ಕಾರ್ಯಸೂಚಿ ಸಿದ್ಧಪಡಿಸಲಾಗುತ್ತದೆ. ಅಮೆರಿಕ, ಬ್ರೆಜಿಲ್ ಇಂಡೋನೇಷ್ಯಾ ಸೇರಿದಂತೆ 22 ದೇಶಗಳ ವಿಜ್ಞಾನಿ ಹಾಗೂ ಪ್ರತಿನಿಧಿಗಳು ಅಧಿವೇಶನದಲ್ಲಿ ಭಾಗವಹಿಸುತ್ತಿದ್ದಾರೆ,'' ಎಂದರು.

25ಕ್ಕೂ ಹೆಚ್ಚು ಮಳಿಗೆಗಳು: ''ತೋಟಗಾರಿಕೆ ಕ್ಷೇತ್ರ ಎದುರಿಸುತ್ತಿರುವ ಸಮಸ್ಯೆ, ಸವಾಲಿನ ಬಗ್ಗೆ ಪ್ರಗತಿಪರ ಕೃಷಿಕರೊಂದಿಗೆ ವಿಜ್ಞಾನಿಗಳು ಹಾಗೂ ಪ್ರತಿನಿಧಿಗಳು ಚರ್ಚಿಸಲಿದ್ದಾರೆ. ನಾವೀನ್ಯತೆಗೆ ಮಿಸಲಾದ 'ಕಿಸಾನ್ ಸಾರಥಿ ಕೋಶ' ಕುರಿತು ಸಮಗ್ರ ಡಿಜಿಟಲ್ ಕೃಷಿ ಸಲಹಾ ವೇದಿಕೆ ಪ್ರದರ್ಶಿಸಲಾಗುತ್ತದೆ. 25ಕ್ಕೂ ಅಧಿಕ ಮಳಿಗೆಗಳಲ್ಲಿ ಹೊಸ ಆವಿಷ್ಕಾರಗಳ ಮಾಹಿತಿ ಒದಗಿಸಲಿದೆ. ಸಾಧಕ ವಿಜ್ಞಾನಿಗಳು ಹಾಗೂ ರೈತರಿಗೆ ಪ್ರಶಸ್ತಿಯನ್ನೂ ಪ್ರದಾನ ಮಾಡಲಾಗುವುದು,'' ಎಂದರು.

ಗೋಷ್ಠಿಯಲ್ಲಿ ಐಸಿಎಆರ್ ಹೆಚ್ಚುವರಿ ಮಹಾ ನಿರ್ದೇಶಕ (ತೋಟಗಾರಿಕೆ) ಡಾ. ಸಂಜಯ್‌ಕುಮಾರ್ ಸಿಂಗ್, ಐಸಿಎಆರ್-ಐಐಎಚ್‌ಆರ್ ನಿರ್ದೇಶಕ ಡಾ. ತುಷಾರ್ ಕಾಂತಿ ಬೆಹೆರಾ, ಬೆಂಗಳೂರು ಕೃಷಿ ವಿವಿ (ಕೃಷಿ) ಡೀನ್ ಡಾ. ಎನ್.ಬಿ. ಪ್ರಕಾಶ್ ಮತ್ತಿತರರು ಉಪಸ್ಥಿತರಿದ್ದರು.

Skarnataka pg 05

ಬೆಳಗ್ಗೆ: ಐಐಎಚ್‌ಆರ್, 11ನೇ ಭಾರತೀಯ ತೋಟಗಾರಿಕೆ ಕಾಂಗ್ರೆಸ್ ಮತ್ತು ಅಂತಾರಾಷ್ಟ್ರೀಯ ಸಮ್ಮೇಳನ, ಅತಿಥಿಗಳು: ಕೇಂದ್ರ ಸಚಿವೆ ಶೋಭಾಕರಂದ್ಲಾಜೆ, ಸ್ಥಳ: ಡಾ.ಬಾಬು ರಾಜೇಂದ್ರ ಪ್ರಸಾದ್ ಅಂತಾರಾಷ್ಟ್ರೀಯ ಸಮ್ಮೇಳನ ಸಭಾಂಗಣ, ಜಿಕೆವಿಕೆ, 9.00

V-karnataka pg 05

Udayavani pg 02

ಭಾರತೀಯ ತೋಟಗಾರಿಕೆ ಕಾಂಗ್ರೆಸ್ ಸಮಾವೇಶ ಇಂದು

ಬೆಂಗಳೂರು: 11ನೇ ಭಾರತೀಯ ತೋಟಗಾರಿಕೆ ಕಾಂಗ್ರೆಸ್ ಮತ್ತು ಅಂತಾರಾಷ್ಟ್ರೀಯ ಸಮಾವೇಶವನ್ನು (ನ.6) ಇಂದಿನಿಂದ ರಿಂದ ನ. 9 ರವರೆಗೆ ಜಿಕೆವಿಕೆಯ ಡಾ.ಬಾಬುರಾಜೇಂದ್ರ ಅಂತಾರಾಷ್ಟ್ರೀಯ ಸಮ್ಮೇಳನ ಕೇಂದ್ರ ಸಭಾಂಗಣದಲ್ಲಿ ಆಯೋಜಿಸಲಾಗಿದೆ ಎಂದು ಐಐಎಚ್‌ಆರ್ ನವದೆಹಲಿ ಉಪಮಹಾನಿರ್ದೇಶಕ ಸಂಜಯ್‌ಕುಮಾರ್ ಸಿಂಗ್ ತಿಳಿಸಿದರು. ಜಿಕೆವಿಕೆಯಲ್ಲಿ ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಇಂಡಿಯನ್ ಅಕಾಡೆಮಿ ಆಫ್ ಅಗ್ರಿಕಲ್ಚರ್ ಸೈನ್ಸ್, ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ ಬಾಗಲಕೋಟೆ, ಭಾರತೀಯ ತೋಟಗಾರಿಕೆ ಸಂಶೋಧನಾ ಸಂಸ್ಥೆ ಮತ್ತು ಜಿಕೆವಿಕೆ ಬೆಂಗಳೂರು ಸಹಯೋಗದಲ್ಲಿ 4 ದಿನಗಳ ಕಾರ್ಯಕ್ರಮ ಆಯೋಜಿಸಲಾಗಿದೆ. ನ.6 ರಂದು ಬೆಳಗ್ಗೆ 9 ಕ್ಕೆ ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ಕಾರ್ಯಕ್ರಮ ಉದ್ಘಾಟಿಸುವರು. ಡಿಎಆರ್‌ಇ ಕಾರ್ಯದರ್ಶಿ ಡಾ. ಮಂಗಿಲಾಲ್ ಜಾಟ್, ಮಾಜಿ ಕಾರ್ಯದರ್ಶಿ ಡಾ.ಆರ್. ಎಸ್.ಪರೋಡಾ, ಜಿಕೆವಿಕೆ ಕುಲಪತಿ ಡಾ.ಎಸ್.ವಿ.ಸುರೇಶ್ ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ ಎಂದು ತಿಳಿಸಿದರು.

Vijayavani pg 03

ಜಿಕೆವಿಕೆಯಲ್ಲಿ ಚಿಂತನ ಮಂಥನ ದೇಶ- ವಿದೇಶದ ಸಾವಿರ ಪರಿಣಿತರು ಭಾಗಿ

ಇಂದಿನಿಂದ ತೋಟಗಾರಿಕೆ ಕಾಂಗ್ರೆಸ್


ವಿಜಯವಾಣಿ ಚಿತ್ರ

ಭಾರತೀಯ ತೋಟಗಾರಿಕೆ ಕಾಂಗ್ರೆಸ್ ಬಗ್ಗೆ ಐಸಿಎಆರ್ ಹೆಚ್ಚುವರಿ ಮಹಾನಿರ್ದೇಶಕ ಡಾ. ವಿ.ಬಿ. ಪಟೇಲ್ ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದರು. ತೋಟಗಾರಿಕೆ ವಿಭಾಗದ ಹೆಚ್ಚುವರಿ ಮಹಾನಿರ್ದೇಶಕ ಡಾ. ಸಂಜಯ್‌ಕುಮಾರ್ ಸಿಂಗ್ ಮತ್ತಿತರರು ಇದ್ದರು.

ಬೆಂಗಳೂರು: ದೇಶದ ತೋಟಗಾರಿಕೆ ಕ್ಷೇತ್ರದಲ್ಲಿ ಹೊಸ ಆವಿಷ್ಕಾರ, ತಂತ್ರಜ್ಞಾನ ಅಳವಡಿಕೆ ಸೇರಿ ರಫ್ತು ಪ್ರಮಾಣವನ್ನು ಹೆಚ್ಚಿಸಲು ಬೇಕಾದ ಸಮಗ್ರ ಸ್ವರೂಪದ ನೀತಿ ನಿರೂಪಣೆ ಬಗ್ಗೆ ಮುಂಚೂಣಿ ವಿಜ್ಞಾನಿ ಬಳಗ ಚಿಂತನ ಮಂಥನ ನಡೆಸುವ ದ್ವೈವಾರ್ಷಿಕ ಭಾರತೀಯ ತೋಟಗಾರಿಕೆ ಕಾಂಗ್ರೆಸ್ (ಐಎಚ್‌ಸಿ) ಗುರುವಾರದಿಂದ (ನ.6) ನಾಲ್ಕು ದಿನ ನಡೆಯಲಿದೆ.

ನವದೆಹಲಿಯಲ್ಲಿರುವ ಭಾರತೀಯ ತೋಟಗಾರಿಕೆ ವಿಜ್ಞಾನಗಳ ಅಕಾಡೆಮಿ (ಐಎಎಚ್‌ಎಸ್) ಹಾಗೂ ಬೆಂಗಳೂರು ಕೃಷಿ ವಿವಿ ಆಶ್ರಯದಲ್ಲಿ ಜಿಕೆವಿಕೆಯ ಡಾ. ಬಾಬು ರಾಜೇಂದ್ರಪ್ರಸಾದ್ ಅಂತಾರಾಷ್ಟ್ರೀಯ ಸಮ್ಮೇಳನ ಕೇಂದ್ರದಲ್ಲಿ ನಡೆಯಲಿದೆ.

ಉದ್ಘಾಟನೆಯನ್ನು ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ನೆರವೇರಿಸಲಿದ್ದಾರೆ. ಐಸಿಎಆರ್‌ನ ಮಾಜಿ ಮಹಾನಿರ್ದೇಶಕ ಡಾ. ಆರ್.ಎಸ್. ಪರೋಡಾ ಡಿಎಆರ್‌ಇ ಕಾರ್ಯದರ್ಶಿ ಡಾ. ಮಂಗಿಲಾಲ್ ಜಾಟ್, ಐಐಎಚ್‌ಆರ್ (ಹೆಸರಘಟ್ಟ) ನಿರ್ದೇಶಕ ಡಾ. ತುಷಾರ್ ಕಾಂತಿ ಬೆಹೆರಾ, ಕೃಷಿ ವಿವಿ ಕುಲಪತಿ ಡಾ. ಎಸ್.ವಿ. ಸುರೇಶ್ ಸೇರಿ ಹಲವು ಗಣ್ಯರು ಪಾಲ್ಗೊಳ್ಳಲಿದ್ದಾರೆ.

ಅಂತಾರಾಷ್ಟ್ರೀಯ ಸಭೆ ನಿಗದಿ: ತೋಟಗಾರಿಕೆ ಕಾಂಗ್ರೆಸ್‌ನಲ್ಲಿ 9 ತಾಂತ್ರಿಕ ಗೋಷ್ಠಿ, 11 ಸಮವರ್ತಿ ಗೋಷ್ಠಿಗಳು, ಉಪನ್ಯಾಸ ಹಾಗೂ ವಿಷಯಾಧಾರಿತ ಕಾರ್ಯಾಗಾರ ನಿಗದಿಯಾಗಿದೆ.

ತೋಟಗಾರಿಕೆ ಕ್ಷೇತ್ರದ ವಿವಿಧ ವಿಜ್ಞಾನಗಳ ಬಗ್ಗೆ ಈವರೆಗೆ ಆಗಿರುವ ಸಾಧನೆ ಹಾಗೂ ಭವಿಷ್ಯದಲ್ಲಿ ಕೈಗೊಳ್ಳಬೇಕಿರುವ ನಿರ್ಧಾರಗಳ ಬಗ್ಗೆ ಸ್ಪಷ್ಟ ಕಾರ್ಯಸೂಚಿಯನ್ನು ಸಿದ್ಧಪಡಿಸಲಾಗುತ್ತದೆ. ಇವುಗಳನ್ನು ಶಿಫಾರಸು ರೂಪದಲ್ಲಿ ಸರ್ಕಾರಕ್ಕೆ ಸಲ್ಲಿಸಲಿದ್ದು, ಕೊನೆ ದಿನ ಕೆಲವೊಂದು ನಿರ್ಣಯಗಳನ್ನು ತೆಗೆದುಕೊಳ್ಳಲಾಗುತ್ತದೆ. ಇದರ ಜತೆಗೆ ಅಂತಾರಾಷ್ಟ್ರೀಯ ಸಭೆ ಕೂಡ ನಿಗದಿಯಾಗಿದೆ. ಅಮೆರಿಕ, ಬ್ರೆಜಿಲ್ ಇಂಡೋನೇಷ್ಯಾ ಸೇರಿ 22 ದೇಶಗಳ ವಿಜ್ಞಾನಿ ಪ್ರತಿನಿಧಿಗಳು ಸಭೆಗಳಲ್ಲಿ ಭಾಗಿಯಾಗಲಿದ್ದಾರೆ ಎಂದು ಐಸಿಎಆರ್‌ನ ಹೆಚ್ಚುವರಿ ಮಹಾನಿರ್ದೇಶಕ ಡಾ. ವಿ.ಬಿ. ಪಟೇಲ್ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

> **ದೇಶದ ತೋಟಗಾರಿಕೆ ವಲಯವು ಕೃಷಿ ಜಿಡಿಪಿಗೆ ಶೇ.34 ಕೊಡುಗೆ ನೀಡುತ್ತಿದೆ. ವಾರ್ಷಿಕ ಶೇ.8 ಪ್ರಗತಿಯೊಂದಿಗೆ ಜಾಗತಿಕ ಮಟ್ಟದಲ್ಲಿ ರಫ್ತು ಮಾಡುವ ತಾಂತ್ರಿಕತೆಯನ್ನು ಹೊಂದಾಗಿದೆ. ಸಾಮಾನ್ಯ ರೈತನೂ ಕೂಡ ರಫ್ತು ಮಾಡಲು ಅಗತ್ಯ ಮಾರ್ಗದರ್ಶನ, ನೆರವು ನೀಡಲಾಗುತ್ತಿದೆ. ಯುವಜನರಿಗೆ ತಂತ್ರಜ್ಞಾನ ಆಧಾರಿತ ತರಬೇತಿ ಮೂಲಕ ಉದ್ದಿಮೆದಾರರಾಗಲು ಸರ್ಕಾರ ಪ್ರೋತ್ಸಾಹ ನೀಡುತ್ತಿದೆ.**
>
> **| ಡಾ. ಸಂಜಯ್‌ಕುಮಾರ್ ಸಿಂಗ್**
> ಹೆಚ್ಚುವರಿ ಮಹಾನಿರ್

ಭಾರತೀಯ ತೋಟಗಾರಿಕೆ ವಿಜ್ಞಾನ ಕಾಂಗ್ರೆಸ್ ಇಂದಿನಿಂದ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನವದೆಹಲಿಯ ಇಂಡಿಯನ್ ಅಕಾಡೆಮಿ ಆಫ್ ಹಾರ್ಟಿಕಲ್ಚರ್ ಸೈನ್ಸಸ್ (ಐಎಎಚ್‌ಎಸ್), ಬೆಂಗಳೂರು ಕೃಷಿ ವಿಶ್ವವಿದ್ಯಾಲಯ, ಬಾಗಲಕೋಟೆಯ ತೋಟಗಾರಿಕೆ ವಿಶ್ವವಿದ್ಯಾಲಯ, ಭಾರತೀಯ ತೋಟಗಾರಿಕೆ ಸಂಶೋಧನಾ ಸಂಸ್ಥೆ (ಐಐಎಚ್‌ಆರ್) ಸಹಯೋಗದಲ್ಲಿ ಇದೇ 6ರಿಂದ 9ರವರೆಗೆ ಜಿಕೆವಿಕೆಯ ಡಾ.ಬಾಬುರಾಜೇಂದ್ರ ಪ್ರಸಾದ್ ಅಂತರರಾಷ್ಟ್ರೀಯ ಸಭಾಂಗಣದಲ್ಲಿ ಭಾರತೀಯ ತೋಟಗಾರಿಕೆ ವಿಜ್ಞಾನ ಕಾಂಗ್ರೆಸ್ ನಡೆಯಲಿದೆ.

ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಐಸಿಎಆರ್ ಉಪ ಮಹಾನಿರ್ದೇಶಕ ಸಂಜಯ್ ಕುಮಾರ್ ಸಿಂಗ್, 'ಸಮ್ಮೇಳನದಲ್ಲಿ ತೋಟಗಾರಿಕೆಗೆ ಸಂಬಂಧಿಸಿದ 11 ವಿಷಯಗಳ ಕುರಿತು ಚರ್ಚೆಗಳು ನಡೆಯಲಿವೆ. ವಿಜ್ಞಾನಿಗಳು, ಸಂಶೋಧಕರು, ಉದ್ಯಮಿಗಳು, ರೈತರು, ವಿದ್ಯಾರ್ಥಿಗಳು ಪಾಲ್ಗೊಳ್ಳಲಿದ್ದಾರೆ. ತೋಟಗಾರಿಕೆ ಕ್ಷೇತ್ರದಲ್ಲಿ ಸಾಧನೆ ಮಾಡಿದ ವಿಜ್ಞಾನಿಗಳು, ಉದ್ಯಮಿಗಳು, ರೈತರಿಗೆ ಸನ್ಮಾನ ಮಾಡಲಾಗುತ್ತದೆ' ಎಂದರು.

'ತೋಟಗಾರಿಕೆ ಅಭಿವೃದ್ಧಿಗೆ ಹೊಸ ಮಾರ್ಗಸೂಚಿಯನ್ನು ಮರು ವ್ಯಾಖ್ಯಾನಿಸುವುದು. ವಿವಿಧ ಬೆಳೆಗಳಿಗೆ ಆದ್ಯತೆ ನೀಡುವುದು, ನೂತನ ತಂತ್ರಜ್ಞಾನಗಳನ್ನು ಉತ್ತೇಜಿಸುವುದು ಮತ್ತು ರೈತ ಆಧಾರಿತ ನಾವೀನ್ಯತೆಗಳನ್ನು ಬಲಪಡಿಸುವುದು ಇದರ ಉದ್ದೇಶವಾಗಿದೆ' ಎಂದು ತಿಳಿಸಿದರು.

'ನ.6ರಂದು ಬೆಳಿಗ್ಗೆ 9ಕ್ಕೆ ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ಈ ಸಮ್ಮೇಳನವನ್ನು ಉದ್ಘಾಟಿಸಲಿದ್ದಾರೆ. ಡಿಎಆರ್‌ಇ ಕಾರ್ಯದರ್ಶಿ ಮಂಗಿ ಲಾಲ್ ಜಾಟ್, ಐಸಿಎಆರ್‌ನ ಮಾಜಿ ನಿರ್ದೇಶಕ ಆರ್.ಎಸ್. ಪರೋಡಾ ಭಾಗವಹಿಸಲಿದ್ದಾರೆ' ಎಂದರು.

ಐಸಿಎಆರ್‌ನ ಎಡಿಜಿ ವಿ.ಬಿ. ಪಟೀಲ್, ಐಐಎಚ್‌ಆರ್‌ನ ನಿರ್ದೇಶಕ ತುಷಾರ್ ಕಾಂತಿ ಬೆಹರಾ, ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ಕೃಷಿ ಡೀನ್ ಎನ್.ಬಿ. ಪ್ರಕಾಶ್ ಸುದ್ದಿಗೋಷ್ಠಿಯಲ್ಲಿದ್ದರು.

Prajavani Pg 05

ಕೇಸರಿ ಕೃಷಿ ಅಭಿವೃದ್ಧಿಗೆ ಸಹಾಯ ಧನಕ್ಕೆ ಆಗ್ರಹ

ಬೆಂಗಳೂರು: ರಾಜ್ಯದಲ್ಲಿ ಹಲವು ಉಪಕ್ರಮಗಳ ಮೂಲಕ ಕೇಸರಿ ಕೃಷಿಯನ್ನು ಅಭಿವೃದ್ಧಿ ಪಡಿಸಲು ಮತ್ತು ಈ ಜಾಗೃತಿ ಮೂಡಿಸಲು ರಾಜ್ಯ ಸರಕಾರ ಸಹಾಯಧನ ನೀಡಬೇಕೆಂದು ಕೇಸರಿ ರೈತರ ಸಂಘದ ಮುಖ್ಯ ಕಾರ್ಯದರ್ಶಿ ಲೋಕೇಶ್ ಆಗ್ರಹಿಸಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ನಮ್ಮ ಸಂಘವು ರೈತರಿಗೆ ಕೇಸರಿ ಕೃಷಿ ತಂತ್ರಗಳಲ್ಲಿ ತರಬೇತಿ ನೀಡುವುದು, ಸುಸ್ಥಿರ ಒಳಾಂಗಣ ಕೃಷಿಯನ್ನು ಉತ್ತೇಜಿಸುವುದು ಮತ್ತು ಕೇಸರಿ ಆಧಾರಿತ ಉತ್ಪನ್ನಗಳಲ್ಲಿ ನಾವೀನ್ಯತೆಯನ್ನು ಬೆಂಬಲಿಸುವಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿದೆ. ಈ ವರ್ಷ, ಬೆಂಗಳೂರಿನಾದ್ಯಂತ 30ಕ್ಕೂ ಹೆಚ್ಚು ರೈತರು ಕೇಸರಿ ಕೃಷಿಯನ್ನು ಯಶಸ್ವಿಯಾಗಿ ಪ್ರಾರಂಭಿಸಿದ್ದಾರೆಂದು ಮಾಹಿತಿ ನೀಡಿದರು.

ಹಲವಾರು ಯುವ ರೈತರು ಕೇಸರಿ ಕೃಷಿ ಘಟಕವನ್ನು ಸ್ಥಾಪಿಸುವಲ್ಲಿ ವೈಯಕ್ತಿಕವಾಗಿ ಹೂಡಿಕೆ ಮಾಡಿದ್ದಾರೆ. ಅವರು ತಮ್ಮ ಮೊದಲ ಹೂಬಿಡುವಿಕೆಯೊಂದಿಗೆ ಗಮನಾರ್ಹ ಯಶಸ್ಸನ್ನು ಸಾಧಿಸಿದ್ದಾರೆ. ಕೇಸರಿ ಗುಲ್ಕಂಡ್ ಮತ್ತು ಕೇಸರಿ ವೋಟೀನ್ ಬಾರ್‌ಗಳಂತಹ ಮೌಲ್ಯವರ್ಧಿತ ಉತ್ಪನ್ನಗಳನ್ನು ಅಭಿವೃದ್ಧಿಪಡಿಸಿದ್ದಾರೆ. ಇದು ಯುವ ಉದ್ಯಮಶೀಲತೆ ಮತ್ತು ನಾವೀನ್ಯತೆಗೆ ಶ್ಲಾಘನೀಯ. ಆ ನಿಟ್ಟಿನಲ್ಲಿ ಸರಕಾರ ಯುವ ರೈತರನ್ನು ಪ್ರೋತ್ಸಾಹಿಸಲು ಸಹಾಯಧನ ನೀಡಬೇಕೆಂದರು.

S-karnataka pg 05

V-karnataka pg 04

ಹಳದಿಯಲ್ಲ, ಕಪ್ಪು ಅರಿಶಿಣ ಬಲ್ಲಿರಾ?

ಸಿಎಚ್‌ಎನ್‌ಬಿಟಿ-1 ತಳಿ ಸಂಶೋಧಿಸಿದ ಬೆಂಗಳೂರು ಕೃಷಿ ವಿವಿ

■ ಎಚ್.ಪಿ. ಪುಣ್ಯವತಿ ಬೆಂಗಳೂರು
punyavathi.hp@timesofindia.com

ಅರಿಶಿಣ ಎಂದರೆ ಹಳದಿ ಬಣ್ಣ ಗೊತ್ತು. ಆದರೆ ಕಪ್ಪು ಅರಿಶಿಣದ ಬಗ್ಗೆ ಕೇಳಿದ್ದೀರಾ?

ಇಲ್ಲ ಎನ್ನುವುದಾದರೆ ಹೆಬ್ಬಾಳದ ಜಿಕೆವಿಕೆಗೆ ಬಂದರೆ ಕಪ್ಪು ಅರಿಶಿಣ ನೋಡಬಹುದು. ಕೃಷಿ ಮೇಳದಲ್ಲಿ(ನ.13 ರಿಂದ 16ರವರೆಗೆ) ಕಪ್ಪು ಅರಿಶಿಣ ಕಂಗೊಳಿಸಲಿದೆ. ಸಿಎಚ್‌ಎನ್‌ಬಿಟಿ-1 ಹೆಸರಿನ ಕಪ್ಪು ಅರಿಶಿಣ ತಳಿಯನ್ನು ಬೆಂಗಳೂರು ಕೃಷಿ ವಿವಿ ಸಂಶೋಧಿಸಿದೆ. 'ಉತ್ಕೃಷ್ಟ ನೀಲಿ ತಿರುಳ'ನ್ನು ಹೊಂದಿರುವುದು ಇದರ ವಿಶೇಷವಾಗಿದೆ.

ಹಿಂದಿಯಲ್ಲಿ ಇದನ್ನು 'ಕಾಲಿ ಹಲ್ದ' ಎಂದು ಕರೆಯಲಾಗುತ್ತಿದ್ದು, ಪಶ್ಚಿಮ ಬಂಗಾಳದಲ್ಲಿ ಕಾಳಿದೇವಿಗೆ ಈ ಕಪ್ಪು ಅರಿಶಿಣವನ್ನೇ ಪೂಜೆಗೆ ಬಳಸುತ್ತಾರೆ. ಹಿಂದೂ ಸಂಪ್ರದಾಯದಲ್ಲಿ ಪವಿತ್ರವಾದುದನ್ನು ದೇವರಿಗೆ ಅರ್ಪಿಸುವುದು ಬಹಳ ಹಿಂದಿನಿಂದಲೂ ನಡೆದುಕೊಂಡು ಬಂದಿದೆ. ಆದರ ಸಾಲಿಗೆ ಕಪ್ಪು ಅರಿಶಿಣವೂ ಸೇರುತ್ತದೆ. ಕಾಡಿನಲ್ಲಿ ಬೆಳೆಯುತ್ತಿದ್ದ ಈ ತಳಿಯನ್ನು ರೈತರ ಬಳಿಗೆ ತರಲು ಪ್ರಯತ್ನಿಸಲಾಗುತ್ತಿದೆ. ಆದರೆ, ಇನ್ನೂ ಬೀಜೋತ್ಪಾದನೆ ಮಾಡಬೇಕಿದೆ ಎನ್ನುತ್ತಾರೆ ತಜ್ಞರು.

ನಾನಾ ರೋಗಗಳ ನಿವಾರಣೆಗೆ ಹಲವು ಔಷಧಗಳ ತಯಾರಿಯಲ್ಲಿ ಕಪ್ಪು ಅರಿಶಿಣ ಬಳಸಲಾಗುತ್ತದೆ. ಪುಡಿ ಮತ್ತು ಎಣ್ಣೆಯ ರೂಪದಲ್ಲಿ ಅಲ್ಲಲ್ಲಿ ಲಭ್ಯವಿದೆ. ಇದಕ್ಕೆ ಸದ್ಯ ಮಾರುಕಟ್ಟೆ ಸೃಷ್ಟಿಯಾಗಬೇಕಿದ್ದು, ತೋಟಗಾರಿಕೆ ಬೆಳೆಗಳನ್ನು ಬೆಳೆಯುವ ರೈತರು ಇದನ್ನು ಬೆಳೆಯಬಹುದು.

ಎಕರೆಗೆ ಎಷ್ಟು ಇಳುವರಿ?: ನೀಲಿ ತಿರುಳನ್ನು ಹೊಂದಿರುವ ಕಪ್ಪು ಅರಿಶಿಣ ಒಂದು ಎಕರೆಗೆ ಸುಮಾರು 4.5ರಿಂದ 5 ಟನ್ ಹಸಿ ಗಡ್ಡೆಗಳ ಇಳುವರಿ ಕೊಡುತ್ತದೆ. ಒಣಗಿಸಿದ ನಂತರ ಶೇ.20ಕ್ಕೆ ಇಳಿಯುತ್ತದೆ. ಆಂದರೆ ಅರಿಶಿಣ ಪುಡಿ ಸುಮಾರು 1ರಿಂದ 1.50 ಟನ್‌ನಷ್ಟು ಬರುತ್ತದೆ. ಒಂದು ಎಕರೆಗೆ 450-500 ಕೆ.ಜಿ.ಯಷ್ಟು ಬೀಜ (ಗಡ್ಡೆ) ಬೇಕಾಗುತ್ತದೆ. ನೀರಾವರಿ ಪ್ರದೇಶದಲ್ಲಿ ಮಾತ್ರ ಬೆಳೆಯಬಹುದು. ಈ ಬೆಳೆಗೆ ನೀರು ಕಡಿಮೆಯಾದರೆ ಎಲೆಚುಕ್ಕೆ ರೋಗ ಕಾಣಿಸಬಹುದು. ಅದನ್ನು ಹೊರತುಪಡಿಸಿದರೆ ಕಾಡಿನ ಜಾತಿಯ ತಳಿಯಾಗಿರುವುದರಿಂದ ಕಪ್ಪು ಅರಿಶಿಣಕ್ಕೆ ರೋಗ ಬಾಧೆಗಳು ತುಂಬಾ ಕಡಿಮೆ. ಒಮ್ಮೆ ನಾಟಿ ಮಾಡಿದರೆ 8 ರಿಂದ 9 ತಿಂಗಳಿಗೆ ಕೊಯ್ಲಿಗೆ ಬರಲಿದೆ.

ಕಪ್ಪು ಅರಿಶಿಣವು ಪ್ರತಿ ಕೆ.ಜಿ.ಗೆ 4 ರಿಂದ 5 ಸಾವಿರ ರೂ. ದರವಿದೆ.





ಔಷಧೀಯ ಗುಣ ಹೆಚ್ಚು

ಕಪ್ಪು ಅರಿಶಿಣವು ಕ್ಯಾನ್ಸರ್ ಗುಣಪಡಿಸುವ ಗುಣ ಹೊಂದಿದೆ. ಜತೆಗೆ, ಕಹಿ ಅಂಶ ಹೊಂದಿದ್ದು, ಮಧುಮೇಹಕ್ಕೂ ರಾಮಬಾಣವಿದ್ದಂತೆ. ನೀಲಿ ತಿರುಳನ್ನು ಹೊಂದಿರುವ ಈ ಅರಿಶಿಣದಲ್ಲಿ ಔಷಧೀಯ ಗುಣಗಳು ಹೆಚ್ಚಾಗಿದ್ದು, ಸೇವನೆಯಿಂದ ರಕ್ತ ಪರಿಶುದ್ಧಗೊಳ್ಳುತ್ತದೆ. ಇದರಿಂದ ರಕ್ತದ ಒತ್ತಡ ಕಡಿಮೆಯಾಗುತ್ತದೆ. ಸಕ್ಕರೆ ಕಾಯಿಲೆ ನಿಯಂತ್ರಣಗೊಳಿಸುತ್ತದೆ. ಜತೆಗೆ, ಸೌಂದರ್ಯ ವರ್ಧಕಗಳಲ್ಲಿಯೂ ಬಳಸಲಾಗುತ್ತದೆ ಎನ್ನುತ್ತಾರೆ ತಜ್ಞರು.

ಅಧಿಕ ಇಳುವರಿ ಕೊಡುವ ಪ್ರತಿಭಾ ತಳಿ

ಐಐಎಸ್‌ಆರ್ ಪ್ರತಿಭಾ ಅರಿಶಿಣ ಹೆಸರಿನ ಮತ್ತೊಂದು ತಳಿಯನ್ನೂ ಇದೇ ವೇಳೆ ಕೃಷಿ ವಿವಿಯು ಮೇಳದಲ್ಲಿ ಬಿಡುಗಡೆ ಮಾಡುತ್ತಿದೆ. ಸುಮಾರು 240ರಿಂದ 245 ದಿನಗಳಲ್ಲಿ ಕಟಾವಿಗೆ ಬರುತ್ತದೆ. ಅಧಿಕ ತಾಜಾ ಗೆಡ್ಡೆಗಳ ಇಳುವರಿ (ಹೆಕ್ಟೇರ್‌ಗೆ ಸುಮಾರು 30 ಟನ್) ಮತ್ತು ಉತ್ತಮ ಗುಣಮಟ್ಟ (ಸಂಸ್ಕರಣಾ ಸಾಮರ್ಥ್ಯ ಶೇ.20) ಹೊಂದಿದೆ. ಗೆಡ್ಡೆಗಳು ಉತ್ಕೃಷ್ಟ ಕೆಂಪು ಹಳದಿ ಬಣ್ಣದ ತಿರುಳು ಹೊಂದಿದೆ. ವಲಯ-6ಕ್ಕೆ ಶಿಫಾರಸು ಮಾಡಲಾಗಿದೆ.

ಕಪ್ಪು ಅರಿಶಿಣವು ಮಾಮೂಲಿ ಅರಿಶಿಣ ಜಾತಿಗೆ ಸೇರಿದ್ದಾದರೂ ಹಳದಿಗಿಂತ ಭಿನ್ನವಾಗಿದ್ದು, ಎರಡನ್ನೂ ಹೋಲಿಕೆ ಮಾಡಲಾಗದು. ಆದರೆ, ಕಪ್ಪು ಅರಿಶಿಣ ಸದ್ಯ ಅಳಿವಿನಂಚಿನಲ್ಲಿದೆ. ನಾವು ಸಂರಕ್ಷಣಾ ದೃಷ್ಟಿಯಿಂದ ಕಾಡಿನಲ್ಲಿ ಉತ್ತಮವಾದುದನ್ನು ತಂದು ಜನರಿಗೆ ಕೃಷಿ ಮೇಳದಲ್ಲಿ ಪರಿಚಯಿಸುತ್ತಿದ್ದೇವೆ.

-ಡಾ. ಎ.ಬಿ. ಮೋಹನ್‌ಕುಮಾರ್
ತೋಟಗಾರಿಕೆ ವಿಜ್ಞಾನಿ, ಚಾಮರಾಜನಗರ

ಆಕರ್ಷಕ ಹೂವು ಬಿಡುವ ರೆಡ್ ಜಿಂಜರ್

ಲವಲವಿಕ GARDEN ಲೋಕ



ರೆಡ್ ಜಿಂಜರ್ ಅನ್ನು ಜಂಗಲ್ ಕಿಂಗ್ ಅಥವಾ ಆಸ್ಟ್ರಿಚ್ ಪ್ಲೂಮ ಜಿಂಜರ್ ಎಂದೂ ಸಹ ಕರೆಯುವುದುಂಟು. ಸದಾ ಹಸಿರುಮಯವಾಗಿರುವ ಇದು ಬಹುವಾರ್ಷಿಕ ಗಿಡ. ಉದ್ದನೆಯ ಎಲೆಗಳನ್ನು ಹೊಂದಿರುವುದಲ್ಲದೆ ಗಿಡದ ತುದಿಯಲ್ಲಿ ಎಲೆಗಳಿಂದ ಮಾರ್ಪಟ್ಟ ಶಂಕುವಿನಾಕಾರದ ಕೆಂಪನೆಯ ಆಕರ್ಷಕ ಹೂಗುಚ್ಛವನ್ನು ಹೊಂದಿರುತ್ತದೆ. ಆದ್ದರಿಂದ ಇದನ್ನು ಅಲಂಕಾರಿಕ ಉದ್ದೇಶದಿಂದ ಗಾರ್ಡನ್‌ಗಳಲ್ಲಿ ಘಟಕಗಳನ್ನು ವಿಂಗಡಿಸುವ ಅಂಚು ಪಟ್ಟಿ ರೀತಿಯಲ್ಲಿ, ನೀರಿನ ಹೊಂಡಗಳ ಸುತ್ತ ಹಾಗೂ ಒಳಾಂಗಣದಲ್ಲಿ ದೊಡ್ಡ ಕುಂಡಗಳಲ್ಲಿ ಬೆಳೆಯುತ್ತಾರೆ. ಇದು ವರ್ಷ ಪೂರ್ತಿ ಹೂ ಕೊಡುತ್ತದೆ. ಈ ಗಿಡವು ಉಷ್ಣ ಮತ್ತು ಸಮಶೀತೋಷ್ಣ ವಾತಾವರಣದಲ್ಲಿ ಉತ್ತಮವಾಗಿ ಬೆಳೆಯುತ್ತದೆ. ಶೀತ ವಾತಾವರಣಕ್ಕೆ ಇದು ಸೂಕ್ತವಲ್ಲ. ಉತ್ತಮವಾಗಿ ಬೆಳೆಯಲು ಉಷ್ಣಾಂಶವು 20-32 ಡಿಗ್ರಿ ಸೆಂ. ಇದ್ದರೆ ಉತ್ತಮ. 10 ಡಿಗ್ರಿ ಸೆಂ.ಗಿಂತ ಕಡಿಮೆ ಇದ್ದರೆ ಸೂಕ್ತವಲ್ಲ. ಇದನ್ನು ಸ್ವಲ್ಪ ನೆರಳಿರುವ ಜಾಗದಲ್ಲಿ ಬೆಳೆಯಬೇಕು. ಸಾಕಷ್ಟು ತೇವಾಂಶವನ್ನು ಕಾಪಾಡಿಕೊಂಡರೆ ಪೂರ್ಣ ಪ್ರಮಾಣದ ಸೂರ್ಯನ ಬೆಳಕಿನಲ್ಲೂ ಬೆಳೆಯಬಹುದು. ಹೆಚ್ಚಿನ ಆರ್ದ್ರತೆ(60% ಗಿಂತ ಹೆಚ್ಚು)ಯಲ್ಲಿ ಇದನ್ನು ಬೆಳೆದರೆ ಉತ್ತಮವಾಗಿ ಬೆಳೆದು ಉತ್ತಮ ಹೂ ಕೊಡುತ್ತದೆ. ಚೆನ್ನಾಗಿ ನೀರು ಬಸಿದು ಹೋಗುವ ಸಾವಯವ ಗೊಬ್ಬರದಿಂದ ಕೂಡಿದ ಗೋಡು ಮಣ್ಣು ಹಾಗೂ ರಸಸಾರ 6-7 ಇರುವ ಮಣ್ಣು ಸೂಕ್ತ. ಇದನ್ನು ಕಂದುಗಳು, ಕಡ್ಡಿಗಳು ಮತ್ತು ಬೀಜದಿಂದ ಸಸ್ಯಾಭಿವೃದ್ಧಿ ಮಾಡಲಾಗುತ್ತದೆ. ಕಂದುಗಳನ್ನು 2-3 ಅಡಿ ಅಂತರದಲ್ಲಿ 5-8 ಸೆಂ. ಮೀ ಆಳದಲ್ಲಿ ನೆಟ್ಟು ಆಗಾಗ ನೀರು ಒದಗಿಸಬೇಕು. ಗೊಬ್ಬರವನ್ನು 6-8 ವಾರಕೊಮ್ಮೆ ಗಿಡಗಳಿಗೆ ನೀಡತಕ್ಕದ್ದು.

ಗಿಡ ಚೆನ್ನಾಗಿ ಬೆಳೆದಂತೆಲ್ಲಾ ಹಳೆಯದಾಗಿ ಒಣಗಿರುವ ಹೂಗುಚ್ಛಗಳು ಮತ್ತು ಎಲೆಗಳನ್ನು ತೆಗೆದು ಹಾಕಬೇಕು. ಇದರಿಂದ ಹೊಸ ಚಿಗುರು ಬಂದು ಗಿಡದ ಆಕರ್ಷಣೆ ಹೆಚ್ಚುತ್ತದೆ. ಇದರ ಹೂ 10-20 ದಿನಗಳವರೆಗೆ ಬಾಡದೆ ಹಾಗೇ ಇರುವುದರಿಂದ ಹಲವಾರು ಕಾರ್ಯಕ್ರಮಗಳಲ್ಲಿ ಇದನ್ನು ಅಲಂಕಾರಗಳಲ್ಲಿ ಬಳಸಿ ಸೊಬಗನ್ನು ಹೆಚ್ಚಿಸುವುದುಂಟು. ■

ಡಾ. ಎಂ. ಶಾಲಿನಿ, ಸಹ ಪ್ರಾಧ್ಯಾಪಕರು
(ತೋಟಗಾರಿಕೆ) ಕೃಷಿ ವಿವಿ, ಬೆಂಗಳೂರು

V-karnataka pg 06

Sowing success, one seed at a time

Dec Hrd pg 15

From modest roots to a thriving enterprise, Gokak's vegetable nurseries are cultivating change in lives and livelihoods, writes Imamhussen Gudunavar

A four kilometre drive from Arabhavi Mutt on the Gokak–Ghataprabha road in Belagavi district unfolds a remarkable story of rural enterprise. The landscape is dotted with rows of shade nets and polyhouses, housing over 120 plant nurseries that nurture seedlings and saplings of vegetables, flowers, fruits and even sugarcane. What began as a localised income-generation activity has now grown into a flourishing business that is transforming lives and reshaping the region's economy.

Traditionally, local farmers here raised vegetable seedlings on small, raised beds. Most of the seedlings were transplanted into their own fields, a few were sold to neighbours. The scene began to change when a few entrepreneurs from Andhra Pradesh arrived and set up organised nurseries in the area. Realising the potential profitability of the business, many local farmers gradually followed suit.

A handful of nurseries soon multiplied. Today, these nurseries in and around Ghataprabha village near Gokak operate year-round. They produce seedlings of tomato, brinjal, cabbage, green chilli, capsicum, marigold, watermelon, sugarcane and more. Each crop has seedlings of hybrid and traditional varieties, and the seedlings are grown based on the cropping season. Buyers come from not only Belagavi, Bagalkot, Vijayapura, Ballari and Dharwad but also Maharashtra, Andhra Pradesh and Tamil Nadu.

"About 21 years ago, I used to grow vegetable seedlings on a small patch near my field," recalls Praveen Mutari, a nursery owner. "Once I learnt about shade nets and polyhouses, I started using them. The business grew steadily. Now, I raise seedlings on 11 acres of owned and leased land, and employ 120 workers," he said, adding that with labour shortages rising, he has even mechanised parts of the process.



A vegetable farm developed using seedlings sourced from a nursery in Ghataprabha near Gokak. PHOTOS BY GOVINDRAJ JAVALI

Busy market

The Ghataprabha vegetable market, one of the busiest in the region due to good road and railway connectivity, begins trading as early as 3.00 am.

"Vegetables from here are supplied in bulk to Maharashtra and Goa," explains Mallikarjun Janamatti, senior assistant director, Horticulture Department. "Farmers from over 35 villages bring their produce here daily. On their way back, they buy seedlings from local nurseries. This encouraged Ghataprabha farmers to expand their nursery business."

According to Janamatti, this nursery belt in Ghataprabha is one of the largest hubs of vegetable nurseries in Karnataka. Before the nursery boom, Gokak and Mudalgi region cultivated horticultural crops on around 6,000 hectares. In the last 15 years, this has increased to over 10,000 hectares. "The impact is not just local—horticulture cultivation in nearby Bagalkot and Vijayapura districts has also grown, thanks to these nurseries supplying quality seedlings to farmers," he added.

Janamatti attributes this success to the region's favourable conditions also. "The area near the Ghataprabha river has excellent irrigation and reddish mixed soil (locally called *jaaj* soil) perfect for seedlings. Farmers who once grew seedlings in the open have now switched to shade nets. Many have built polyhouses too."



A woman prepares a seed tray in the plant nursery.

Adopting modern methods

The shift from traditional methods to modern nursery techniques has been a key factor in the growth of these nurseries. "In open-field nurseries, seedling growth largely depended on the weather, often resulting in uneven germination and weak plants. The risk of damage from animals was also higher. However, these modern nurseries now produce healthier seedlings, as they are grown in controlled environments using precise techniques," said Mahantesh Murgod, joint director of horticulture, Belagavi.

Not every nursery is large here. Many farmers run small, high-tech nurseries on plots as tiny as 0.2 acres. "We fill plastic trays with cocopeat, sow quality seeds sourced locally and from different companies and cover them for three days to retain moisture," explains Suresh Devamane, another nursery owner.

"Once they sprout, we treat them with crop-specific pesticides and water them regularly. In 25 to 35 days, they are ready to enter the field. Shade nets protect them from the sun and rain, so we can work across the year."

For farmers who buy these seedlings, the benefits are tangible. "I own four acres of land—two acres each for sugarcane and vegetables. Earlier, when I used seedlings grown in open fields, yields were average," says Raju Raibag, a farmer from Shindikurabet village. "Now, with nursery-raised seedlings, productivity has improved and crops mature faster. The plants are healthier and disease-free."

Echoing similar experience, Siddappa Hosamani from Shirahatti B K village in Hukkeri taluk, said, "Seedlings grown in open fields sometimes failed and we suffered losses. Now, by adopting scientific nursery practices, we get better yields. I am currently planting nursery-grown vegetable seedlings across two acres."

Thus, the nurseries thriving in this region have turned thousands of farmers' lives greener, in every sense of the word.

(Translated from Kannada by Divyashri Mudakavi)

FEED
Send you
comm
spect
deccanh